ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪಾಯಿಷ್ ಆದ್ದು. [ನಂ. 20.

ಬೆಂಗಳೂರು, ಗುರುವಾರ, ಮೇ ತಾ|| 16, ಸ್ 1907.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಕಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರ್‌ಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಲೆಕ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರಗಳು, ಫಾರೆಸ್ಟ್ರು, ರೆಜಿಸ್ಟ್ರೇರ್ಸ ವ ಎಡ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜಿರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೋಲೀಸ್ ಸೂಪರ್‌ಟೆಂಡೆಂಟರ್ರು, ಫಾರೆಸ್ಟ್ರು ಆಫಿಸರಗಳು ಇವರುಗಳಿಂದ ಕೊಡೋಕಾದ ಇಸ್ತಿಹಾರ್‌ಗಳು ವಗ್ಯೆರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಮಾಫೀಸ್ ನೋಟಸ್‌ಗಳು.

3ನೆ ಭಾಗ—ಲೆಜಿಸ್‌ಲೇಟಿವ್ ರೆಗ್ಯುಲೇಷ್ಸ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಕಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 27ನೆ ಏಪ್ರೆಲ್ 1907.

ನಂ. 9973—ಸ್ಯಾನಿಟೆರಿ (6ಗಿ-06)—4, ಸಮಸ್ತ ಜನರ ತಿಳಿವಳಿಕೆದು ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಿಂ ಸಮೂಹಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷ್ಸ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್‌ನಾಮಗಳ ಮೂಲಕ ಪ್ರಕಟಿಸಲ್ಪಟ್ಟ ರೆಗ್ಯುಲೇಷನ್ಸುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವದು:

ಸ್ಥಳ.	ತಾಲ್ಲೂಕು.
ಉಗಣೆ	ಹಾಸನ.

ತಾರೀಖು 8ನೆ ಮೇ 1907.

ನಂ. 10452—ಸ್ಯಾನಿಟೆರಿ ಎಫ್. 156 ಆಫ್ 1906, ಕೋಲಾರ ಡಿಸ್ಟ್ರಿಕ್ಟು ಬಾಗೇಪಲ್ಲಿ ತಾಲ್ಲೂಕಿನ ದೇವರಗಂಡಿ ಗ್ರಾಮಕ್ಕೆ ಶ್ರೀ ಗಡಿದಂ ವೆಂಕಟರಮಣಸ್ವಾಮಿ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ಸು ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಮೇ 27ನೆ ತಾರೀಖಿನಿಂದ 1907ನೆ ಜೂನ್ 2ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.